## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 502 |
| 2 | ಸದಸ್ಯರ ಹೆಸರು | : | ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 14-08-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಓಕಳಿಪುರಂ ನಿಂದ ರೈಲ್ವೆ ನಿಲ್ದಾಣದವರೆಗೂ ನಿರ್ಮಾಣ ಮಾಡಲಾಗಿರುವ ಅಷ್ಟಪಥ ರಸ್ತೆಯ ಕಾಮಗಾರಿಯು ಎಂದು ಪ್ರಾರಂಭವಾಯಿತು ಹಾಗೂ ಪ್ರಸ್ತುತ ಯಾವ ಹಂತದಲ್ಲಿದೆ; | ಬೆಂಗಳೂರು ನಗರದ ಓಕಳೀಪುರಂನಿಂದ ಪೌಂಟೇನ್ ವೃತ್ತದವರೆಗೆ ಲೂಪ್‌ಗಳೊಂದಿಗೆ ಅಷ್ಟಪಥ ಕಾರಿಡಾರ್ ನಿರ್ಮಾಣ ಕಾಮಗಾರಿಗೆ ದಿನಾಂಕ:10.12.2012 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ದಿನಾಂಕ: 01.07.2015 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿ ಬಹುತೇಕ ಪೂರ್ಣಗೊಂಡಿರುತ್ತದೆ. ಪ್ರಸ್ತುತ ರೈಲ್ವೇ ಇಲಾಖೆಯ ವತಿಯಿಂದ ಬೆಂಗಳೂರು-ಚೆನ್ನೈ ರೈಲ್ವೇ ಹಳಿಗಳ ಕೆಳಭಾಗದಲ್ಲಿ ಬಾಕಿ ಇದ್ದ ಎರಡು ಕೆಳ ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ಜನವರಿ ಮಾಹೆಯಲ್ಲಿ ಪೂರ್ಣಗೊಳಿಸಿದ್ದು ಕೆಳ ಸೇತುವೆಗಳ ಮಧ್ಯ ಭಾಗದಲ್ಲಿ ತಡೆಗೋಡೆಗಳನ್ನು ನಿರ್ಮಿಸುವ ಕಾಮಗಾರಿಗಳು ರೈಲ್ವೇ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವುದರಿಂದ ಪಾಲಿಕೆಯ ವತಿಯಿಂದ ಕೈಗೆತ್ತಿಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುವುದಿಲ್ಲ. ರೈಲ್ವೇ ಇಲಾಖೆರವರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| ಆ) | ಈ ಕಾಮಗಾರಿಯನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿತ್ತು; ಕಾಮಗಾರಿ ಪೂರ್ಣಗೊಳಿಸಲು ನೀಡಲಾದ ಕಾಲಾವಧಿ ಎಷ್ಟು; ನೀಡಲಾಗಿರುವ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೇ; | ಈ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ॥ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ರವರಿಗೆ ನೀಡಲಾಗಿರುತ್ತದೆ. ಕಾಮಗಾರಿ ಪೂರ್ಣಗೊಳಿಸಲು 18 ತಿಂಗಳು ಕಾಲಾವಧಿಯನ್ನು ನೀಡಲಾಗಿತ್ತು. ಗುತ್ತಿಗೆದಾರರು ನಿರ್ವಹಿಸಬೇಕಾಗಿರುವ ಕೆಲವು ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸದಿರುವುದಕ್ಕೆ ರೂ.56,63,972/-ಗಳ ದಂಡವನ್ನು ವಿಧಿಸಲಾಗಿದೆ. |
| ಇ) | ಸರ್ಕಾರ ನೀಡಿರುವ ಸಮಯಕ್ಕೆ ಸರಿಯಾಗಿ ಕಾಮಗಾರಿ ಪೂರೈಸದಿದ್ದರೆ, ಸರ್ಕಾರದ ನಿಯಮದಡಿ ಗುತ್ತಿಗೆದಾರರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; | |
| ಈ) | ಈ ಯೋಜನೆಗೆ ಪ್ರಾರಂಭದಲ್ಲಿ ಎಷ್ಟು ಕೋಟಿ ರೂಪಾಯಿಗೆ ಟೆಂಡರ್‌ಗೆ ಅನುಮತಿ ನೀಡಲಾಗಿದೆ; ತದನಂತರ ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು; (ಕಾರಣಗಳೊಂದಿಗೆ ಪೂರ್ಣ ವಿವರ ಒದಗಿಸುವುದು) | ಈ ಯೋಜನೆಗೆ ರೂ.102.83 ಕೋಟಿಗಳ ಗುತ್ತಿಗೆಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಯು Lump sum Turnkey Contract ಆಗಿರುವುದರಿಂದ ಈ ಮೊತ್ತದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ ಹಾಗೂ ಹೆಚ್ಚುವರಿಯಾಗಿ ರೂ.10.00 ಕೋಟಿಗಳ ಅನುದಾನವನ್ನು "ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯ ಅಡಿಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಅನುದಾನವನ್ನು ಬಳಸಿಕೊಂಡಿರುವುದಿಲ್ಲ. |

| | | |
|---|---|---|
| ಉ) | ಈ ಯೋಜನೆಯು ಅವೈಜ್ಞಾನಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಒಂದು ಕಡೆಯಿಂದ ರಸ್ತೆ ದೊಡ್ಡದಾಗಿದ್ದು, ತದನಂತರ ರಸ್ತೆ ಕಿರಿದಾಗಿರುವುದರಿಂದ, ಟ್ರಾಫಿಕ್ ಜಾಮ್ ಆಗುತ್ತಿರುವುದು ಹಾಗೂ ಮಳೆಯ ನೀರಿನಿಂದ ಸಂಚಾರ ಮಾಡಲು ಕಷ್ಟವಾಗುತ್ತಿದ್ದು, ಇದನ್ನು ಅಧಿಕಾರಿಗಳು ಗಮನಹರಿಸಿಲ್ಲವೇ; ಹಾಗಿದ್ದರೆ ಇದನ್ನು ಸರಿಪಡಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ? | • ಈ ಕಾಮಗಾರಿಯು ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಯ ನಂತರವಷ್ಟೇ ಕಾರ್ಯರೂಪಕ್ಕೆ ತಂದಿದ್ದು ವೈಜ್ಞಾನಿಕವಾಗಿಯೇ ನಿರ್ಮಿಸಲಾಗುತ್ತಿದೆ.<br>• ರೈಲ್ವೇ ಇಲಾಖೆಯ ವತಿಯಿಂದ ಬೆಂಗಳೂರು-ತುಮಕೂರು ರೈಲ್ವೇ ಹಳಿಗಳ ಕೆಳಭಾಗದ ಕೆಳಸೇತುವೆಗಳ ನಿರ್ಮಾಣ ಪೂರ್ಣಗೊಳಿಸಿದ್ದು, ರಸ್ತೆಗಳು ಸುಮಾರು 15 ಮೀಟರ್‌ಗಳಷ್ಟು ದೊಡ್ಡದಾಗಿರುತ್ತದೆ.<br>• ಬೆಂಗಳೂರು-ಚೆನ್ನೈ ರೈಲ್ವೇ ಹಳಿಗಳ ಕೆಳಭಾಗದಲ್ಲಿ ಬಾಕಿ ಇದ್ದ ಎರಡು ಕೆಳ ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ಜನವರಿ ಮಾಹೆಯಲ್ಲಿ ಪೂರ್ಣಗೊಳಿಸಿದ್ದು ಕೆಳ ಸೇತುವೆಗಳ ಮಧ್ಯ ಭಾಗದಲ್ಲಿ ತಡೆಗೋಡೆಗಳನ್ನು ನಿರ್ಮಿಸುವ ಕಾಮಗಾರಿಗಳು ರೈಲ್ವೇ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುತ್ತದೆ, ಈ ಬಾಕಿಯಿರುವ ಕೆಳಸೇತುವೆಗಳ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡ ನಂತರ ಹೊರ ಮತ್ತು ಒಳ ಬರುವ ವಾಹನಗಳಿಗೆ ಸುಮಾರು 15 ಮೀಟರ್‌ಗಳಷ್ಟು ಅಗಲಕ್ಕೆ ರಸ್ತೆಯು ದೊಡ್ಡದಾಗುತ್ತದೆ.<br>• ಬೆಂಗಳೂರು-ತುಮಕೂರು ರೈಲ್ವೇ ಕೆಳಸೇತುವೆಯ ಹತ್ತಿರ ತಾತ್ಕಾಲಿಕವಾಗಿ ಅಳವಡಿಸಿದ್ದ 300 ಮಿ.ಮೀ. ವ್ಯಾಸದ ಪೈಪ್ ಆಗಾಗ್ಗೆ ಬ್ಲಾಕ್ ಆಗುತ್ತಿದ್ದ ಕಾರಣ, ನೀರು ನಿಂತು ವಾಹನ ಸಂಚಾರಕ್ಕೆ ಉಂಟಾಗುತ್ತಿದ್ದ ಅಡಚಣೆಯನ್ನು ತಪ್ಪಿಸಲು 900 ಮಿ.ಮೀ. ವ್ಯಾಸದ NP-4 ಪೈಪ್‌ಗಳನ್ನು ಅಳವಡಿಸಿ ನೀರು ನಿಲ್ಲದಂತೆ ಕ್ರಮವಹಿಸಲಾಗಿರುತ್ತದೆ.<br>• ಬೆಂಗಳೂರು-ಚೆನ್ನೈ ರೈಲ್ವೇ ಹಳಿಗಳ ಕೆಳಭಾಗದಲ್ಲಿ ಬೃಹತ್ ನೀರುಗಾಲುವೆಗೆ ಸಂಪರ್ಕಿಸಲು ರೈಲ್ವೇ ಇಲಾಖೆಯ ಮಾರ್ಗಸೂಚಿಯಂತೆ 1600 ಮಿ.ಮೀ. ವ್ಯಾಸದ ಎಂ.ಎಸ್. ಪೈಪ್ ಅನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ತಾತ್ಕಾಲಿಕವಾಗಿ ಮಳೆ ನೀರು ನಿಲ್ಲದಂತೆ 5 ಹೆಚ್.ಪಿ. ಮೋಟಾರ್ ಅನ್ನು ಅಳವಡಿಸಿ ನೀರನ್ನು ಹೊರ ಹಾಕಲಾಗುತ್ತಿರುತ್ತದೆ. |

**ನಅಇ 372 ಎಂಎನ್‌ವೈ 2025 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ